**ಕರ್ನಾಟಕ ಸರ್ಕಾರದ ನಡವಳಿಗಳು.**

ವಿಷಯ: ಔಷಧ ನಿಯಂತ್ರಣ ಇಲಾಖೆಯ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮ ಪ್ರವೇಶ/ಪರೀಕ್ಷೆಗಳ ಶುಲ್ಕ ಹಾಗೂ ಸಂಭಾವನೆಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ.
1. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಔನಿಇ/859/ಸಿಬ್ಬಂದಿ/2011-12, ದಿನಾಂಕ: 20.10.2012.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 144 ಪಿಟಿಡಿ 2006, ದಿನಾಂಕ: 11.08.2006.

****

ಪ್ರಸ್ತಾವನೆ,

ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಔಷಧ ನಿಯಂತ್ರಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ.ಫಾರ್ಮ ಪ್ರವೇಶ/ಪರೀಕ್ಷೆಗಳ ಶುಲ್ಕ ಹಾಗೂ ಸಂಭಾವನೆಗಳನ್ನು ನಿಗಧಿಪಡಿಸಿ ಈಗಾಗಲೇ 05 ವರ್ಷಗಳಿಗಿಂತ ಹೆಚ್ಚಿನ ಅವಧಿ ಕಳೆದಿರುವುದರಿಂದ ಡಿ-ಫಾರ್ಮ ಪ್ರವೇಶ ಹಾಗೂ ಪರೀಕ್ಷೆಗಳಿಗೆ ನೀಡುತ್ತಿರುವ ವಿವಿಧ ಸಂಭಾವನೆಗಳನ್ನು ಮತ್ತು ಶುಲ್ಕಗಳನ್ನು ಪರಿಷ್ಕರಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2)ರಲ್ಲಿನ ಸರ್ಕಾರದ ಆದೇಶದಲ್ಲಿ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುತ್ತಿರುವ ಡಿ-ಫಾರ್ಮ ಪ್ರವೇಶ/ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಸಂಭಾವನೆಗಳು ಹಾಗೂ ವಿವಿಧ ಸೇವೆಗಳಿಗೆ ವಿಧಿಸುವ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ಸದರಿ ಆದೇಶದಲ್ಲಿ ನಿಗದಿಪಡಿಸಿರುವ ಸಂಭಾವನೆ ಹಾಗೂ ಶುಲ್ಕಗಳ ರೀತ್ಯಾ ಪ್ರಸ್ತುತ ಪಾವತಿ ಮಾಡಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಬೆಲೆ ಏರಿಕೆ ಹಾಗೂ ವಿವಿಧ ಪರೀಕ್ಷಾ ಮಂಡಳಿಗಳು, ವಿಶ್ವವಿದ್ಯಾಲಯಗಳು, ಪರೀಕ್ಷಾ ಶುಲ್ಕಗಳನ್ನು ಹಾಗೂ ಸಂಭಾವನೆಗಳನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮ ಪ್ರವೇಶ/ಪರೀಕ್ಷೆಗಳ ವಿವಿಧ ಸೇವೆಗಳಿಗೆ ವಿಧಿಸುತ್ತಿರುವ ಶುಲ್ಕಗಳನ್ನು ಹಾಗೂ ನೀಡುತ್ತಿರುವ ವಿವಿಧ ಸಂಭಾವನೆಗಳನ್ನು ಹೆಚ್ಚಿಸಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 361 ಪಿಟಿಡಿ 2012, ದಿನಾಂಕ:29.04.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಔಷಧ ನಿಯಂತ್ರಣ ಇಲಾಖೆಯ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನಡೆಸುವ ಡಿ-ಫಾರ್ಮ ಪ್ರವೇಶ/ಪರೀಕ್ಷೆಗಳ ಶುಲ್ಕ ಹಾಗೂ ಸಂಭಾವನೆಗಳನ್ನು ಅನುಬಂಧ-1 ಮತ್ತು 2ರಲ್ಲಿ ನೀಡಿರುವಂತೆ 2014ನೇ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಷ್ಕರಿಸಲಾಗಿದೆ.

1. ಪರಿಷ್ಕರಿಸಿದ ಪರೀಕ್ಷಾ ಶುಲ್ಕಗಳಿಂದ ಬಂದ ಹಣವನ್ನು ರಾಜ್ಯ ಸರ್ಕಾರದ ರಾಜ್ಯಸ್ವ ಲೆಕ್ಕಶೀರ್ಷಿಕೆಗೆ ಜಮಾ ಮಾಡತಕ್ಕದ್ದು.

. . . . 2